**OS. No. 261/2017**
**DW - 1**

**ಪ್ರಮಾಣೀಕರಿಸಲಾದ ದಿನಾಂಕ: 11-06-2026**

**ಪಾಟೀ ಸವಾಲು : ವಾದಿ ಪರ ಶ್ರೀ. ಟಿ ಕೆ ಯು ವಕೀಲರಿಂದ :-**

ಕೆಂಗಯ್ಯ ರವರಿಗೆ 3 ಜನ ಗಂಡು ಮಕ್ಕಳಿದ್ದು, ಕೊನೆಯ ಮಗನೇ ವಾದಿಯಾಗಿರುತ್ತಾನೆ ಎಂದರೆ ಸರಿ . ದಾವಾ ಆಸ್ತಿ ನಮಗೆ ಸೇರಿರುತ್ತದೆ . ದಾವಾ ಅಸ್ತಿಯು ನಮಗೆ ಸೇರಿದ್ದು ಎಂದು ನಾವು ಒಂದು ದಾವೆಯನ್ನು ದಾಖಲಿಸಿದ್ದೆವು. ನಾನು ದಾಖಲಿಸಿದದಾವೆ ಯ ನಂ. ಓ ಎಸ್.ನಂ. 232/2017 ಆಗಿರುತ್ತದೆ ಎಂದರೆ ಸರಿ . ಸಾಕ್ಷಿಗೆ ಸದರಿ ಓ ಎಸ್ ನಂ 232/2017 ರ ತೀರ್ಪು ಮತ್ತು ಡಿಕ್ರಿಯ ಧೃಡೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿಯ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.10 ಎಂದು ಗುರುತಿಸಲಾಯಿತು. ನಾವು ಸದರಿ ತೀರ್ಪಿನ ವಿರುದ್ದ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ . ಸದರಿ ಮೇಲ್ಮನವಿಯಲ್ಲೂ ಕೂಡಾ ದಾವಾ ಆಸ್ತಿಯಲ್ಲಿ ಬರೆದಿರುವ ಚಕ್ಕುಬಂಧಿ ನಮಗೇ ಸೇರಿದ್ದು ಎಂದು ನಾವು ಪ್ರತಿಪಾದಿಸಿರುತ್ತೇವೆ ಎಂದರೆ ಸರಿ . ಶಿವಣ್ಣ ರವರಿಗೆ ಯಾವುದೇ ಸ್ವತ್ತು ಇರುವುದಿಲ್ಲ ಎಂದು ನಾನು ಪ್ರದಿಪಾದಿಸುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ನಿಪಿ.1 ಮ್ಯೂಟೇಷನ್ ರಿಜಿಸ್ಟ್ರರನು ತೋರಿಸಲಾಗಿ ಅದರಲ್ಲಿ ಶಿವಣ್ಣ ಬಿನ್ ಕೆಂಗಯ್ಯ ಎಂದು ನಮೂದೂ ಮಾಡಿರುವಂತಹ ವ್ಯಕ್ತಿ ವಾದಿಯಾಗಿರುತ್ತಾನೆ ಎಂದು ಸೂಚಿಸಿದ್ದಾರೆ ಸರಿ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿ ನಮೂದಿಸಿರುವ ವಿಸ್ತೀರ್ಣ ಮತ್ತು ಚಕ್ಕುಬಂಧಿ ಸುಳ್ಳು ಆಗಿರುತ್ತದೆ . ನಿಪಿ.2 ಖಾತೆ ವಾದಿಯ ಹೆಸರಿಗೆ ಇರುವುದು ಗೊತ್ತಾದ ನಂತರ ನಾನು ಮೇಲೆ ಹೇಳಿದಂತಹ ದಾವೆಯನ್ನು ದಾಖಲು ಮಾಡಿರುತ್ತೇನೆ. ಸದರಿ ಖಾತಯ ವಿರುದ್ದ ನಾನು ಮೇಲ್ಮನವಿಯನ್ನು ಸಲ್ಲಿಸಿರವುದಿಲ್ಲ. 2014 ನೇ ಇಸವಿಯಲ್ಲಿ ಕೆಂಗಯ್ಯನ ಹೆಸರಿಂದ ವಾದಿಯ ಹಸೆರಿಗೆ ಖಾತೆ ಬದಲಾವಣೆ ಆಗಿರುವುದು ನನ್ನ ಗಮನಕ್ಕೆ ಬಂದಿರುತ್ತದೆ .

ನಿಪಿ.10 ದಾವೆಯಲ್ಲಿ ಕೂಡಾ ನನ್ನದೇ ವಿಚಾರಣೆ ಅಗಿರುತ್ತದೆ . ನಾನು ಈ ಪ್ರಕರಣದಲಿ ಹಾಜರುಪಡಿಸಿರುವಂತ ನಿಡಿ-1 ರಿಂದ 11 ದಾಖಲಾತಿಗಳನ್ನೇ ಆ ಪ್ರಕರಣದಲ್ಲೂ ಕೂಡಾ ಹಾಜರುಪಡಿಸಿದ್ದೆ. ನನ್ನ ತಂದೆಯಾದ ರೇವಣ್ಣ ರವರಿಗೆ ನನ್ನನ್ನೂ ಸೇರಿಸಿ 3 ಜನ ಮಕ್ಕಳು ಎಂದರೆ ಸರಿ . ದಾವಾ ಆಸ್ತಿಯು ರೇವಣ್ಣ ರವರಿಗೆ ಸೇರಿರುತ್ತದೆ ಎಂದು ನಾನು

ಪ್ರತಿಪಾದಿಸುತ್ತಿದ್ದೇನೆ.

ಸದರಿ ದಾವಾ ಅಸ್ತಿಯನ್ನು ರೇವಣ್ಣ ರವರು ಮೃತಪಟ್ಟ ನಂತರ ನಾನು ಮತ್ತು 1 ಹಾಗೂ 3ನೇ ಪ್ರತಿವಾದಿಯರು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದೇನೆ. ನನ್ನ ತಂದೆಗೆ ಸೇರಿದ ಆಸ್ತಿಯು ಪೂ- ಪ 25 ಅಡಿ , ಉ- ದ 55 ಅಡಿ ಇರುತ್ತದೆ . ಅದರಲ್ಲಿ ನನಗೆ ಪೂ- ಪ 25 ಅಡಿ , ಉ- ದ 55 ಅಡಿ ಬಂದಿರುತ್ತದೆ . 1ನೇ ಪ್ರತಿವಾದಿಗೆ ಪೂ- ಪ 26 ಅಡಿ , ಉ- ದ 55 ಅಡಿ ಬಂದಿರುತ್ತದೆ , 3ನೇ ಪ್ರತಿವಾದಿಗೆ ಪೂ- ಪ 26 ಅಡಿ , ಉ- ದ 55 ಅಡಿ ಬಂದಿರುತ್ತದೆ . ಇದರಂತೆ ನಾವು ಮೂರು ಜನರು ಪ್ರತ್ಯೇಕ ಖಾತೆ ಮಾಡಿಸಿಕೊಂಡಿರುತ್ತೇವೆ.

ನಾವು ಖಾತೆ ಮಾಡಿಸಿಕೊಳ್ಳಲು ಹೋಗುವಷ್ಟರಲ್ಲಿ ದಾವಾ ಆಸ್ತಿಯ ಖಾತೆಯು ವಾದಿಯ ಹಸೆರಿಗೆ ನಿಪಿ.1 ಮತುತ 2 ರಂತೆ ವರ್ಗಾವಣೆ ಆಗಿರುತ್ತದೆ. ಆಗ ನಮಗೆ ವಾದಿ ಹೇಳುತ್ತಿರುವ ವಿಸ್ತೀರ್ಣ ಬೇರೆ ಮತ್ತು ನಾನು ಹೇಳುತ್ತಿರುವ ವಿಸ್ತೀರ್ಣ ಬೇರೆ ಬೇರೆ ಎಂದು ತಿಳಿದು ಬಂತು.

ನಾನು ಪಂಚಾಯಿತಿಯಿಂದ ನನ್ನ ಸ್ವತ್ತನ್ನು ಅಳತೆ ಮಾಡಿಸಿರುತ್ತೇನೆ. ಅದರಂತೆ ಪಂಚಾಯಿತಿಯವರು ನನ್ನ ಜಮೀನಿನ ಅಳತೆ ಮತ್ತು ಚಕ್ಕು ಬಂಧಿಯನ್ನು ಕೊಟ್ಟಿರುತ್ತಾರೆ . ಸದರಿ ದಾಖಲಾತಿಯನ್ನು ನಾನು ಹಿಂದಿನ ದಾವೆಯಲ್ಲಿ ಹಾಕಿ ಸಾಕ್ಷಿ ನುಡಿದಿರುತ್ತೇನೆ, ನನಗೆ ವಾದಿಗೆ ತೊಂದರೆ ಕೂಡುವ ಮತ್ತು ಅವರ ಜಾಗವನು ಲಪಟಾಯಿಸುವ ಉದೆದೇಶ ಇರುವುದಿಲ್ಲ.

ದಾವಾ ಆಸ್ತಿ ನನಗೆ ಸೇರುವುದಿಲ್ಲ ಎಂದರೆ ಸ ರಿ . ನನ್ನ ಸ್ವತ್ತು ಎಲ್ಲಿದೆ ಎಂದು ನನಗೆ ನಿರ್ದಿಷ್ಟವಾಗಿ ತಿಳಿಯದೇ ಇರುವ ಕಾರಣ ವಾದಿಗೆ ವಯಸ್ಸಾಗಿರುವ ಕಾರಣ ಆತನು ಆಸ್ತಿಯನ್ನು ಲಪಾಟಾಯಿಸಲು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾ ಯಾಧೀಶರು, ತಿಪಟೂರು.**